ಮಾಡಲು ನಿಮಗೆ ಎಷ್ಟು ಹಣ ಬೇಕು? ಒಂದು ಕೋಟಿ ರೂಪಾಯಿಯು ನಿಮಗೆ ಬೇಕಾಗಿಲ್ಲ, ದಯವಿಟ್ಟು ಇದರ ಬಗ್ಗೆ ಸ್ಪೆಸಿಫಿಕ್ ಆಗಿ ಹೇಳಿ ನಮ್ಮ ಹತ್ತಿರ ದುಡ್ಡಿಲ್ಲ ಅಂದರೆ ಹೇಗಾಗುತ್ತದೆ. ಆ ಹುಡುಗರಿಗೆ ಕುಡಿಯಲಿಕ್ಕೆ ನೀರಿಲ್ಲ. ಮೂರು ತಿಂಗಳಿಗೊಂದು ಸಾರಿ ಅವರು ಸ್ನಾನ ಮಾಡುತ್ತಿದ್ದಾರೆ ಕೊನೆಯ ಪಕ್ಷ ನೀವು ಈ ವರ್ಷ ಬೇರೆ ಏನು ಮಾಡದಿದ್ದರೂ ಸಹಿತ ರಾಜ್ಯಸರ್ಕಾರದ ಯಾವುದಾದರೂ ನಿಧಿಯಿಂದ 250 ಬೋರ್‌ವೆಲ್‌ಗಳನ್ನು ಹಾಕಿಕೊಡುತ್ತೇವೆ ಎನ್ನುವಂತಹ ಭರವಸೆಯನ್ನಾದರೂ ಕೊಡಿ.

ಶ್ರೀ ಬಿ. ಶಿವಣ್ಣ:- ನೀರನ್ನು ಒದಗಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. 25-30 ವರ್ಷಗಳಿಂದಲೂ ಈ ಹಾಸ್ಟಲ್‌ಗಳು ಇವೆ. ಸಾವಿರ ಹಾಸ್ಟಲ್‌ಗಳು ಇವೆ. ಆ ಸಾವಿರ ಹಾಸ್ಟಲ್‌ಗಳಿಗೆ ಒಂದೇ ಸಾರಿ ಬಿಲ್ಡಿಂಗ್ ಅನ್ನು ಒದಗಿಸಲು ಆಗುವುದಿಲ್ಲ, ನೀರಿನ ವ್ಯವಸ್ಥೆಯನ್ನು ಒದಗಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ಬರೀ ನೀರಿನ ವ್ಯವಸ್ಥೆ ಒಂದೇ ಅಲ್ಲ ಆ ಹಾಸ್ಟಲ್‌ಗಳು ನರಕ ಇದ್ದಹಾಗೆ ಇವೆ. ಎಲ್ಲೆಲ್ಲಿ ಇವರು ಹಾಸ್ಟಲ್‌ಗಳು ನಡೆಸುತ್ತಿದ್ದಾರೆ ಅಲ್ಲಿಗೆ ಒಂದು ಸಾರಿ ತಾವು ಹೋಗಿ ನೋಡಬೇಕು ಅಲ್ಲಿ ಸಂಪೂರ್ಣವಾಗಿ ನರಕವಾಗಿದೆ. ಬೇರೆ ಮಾತೇ ಇಲ್ಲ, ನರಕಕ್ಕೆ ಹೋಗಬೇಕಾದರೆ ಈ ಹಾಸ್ಟೆಲ್‌ಗಳಿಗೆ ಹೋಗಬೇಕು. ಅಲ್ಲಿ ತಿಗಣೆ ಕಾಟವನ್ನು ತಡೆದುಕೊಳ್ಳುವುದಕ್ಕೆ ನಿಮ್ಮ ಕೈಯಲ್ಲಿ ಆಗುವುದಿಲ್ಲ.

ರೇಷ್ಮೆ ಇಲಾಖೆಯಲ್ಲಿ ಮಹಿಳೆಯರಿಗೆ ವಿಶೇಷ ಯೋಜನೆ

84 (494). ಶ್ರೀ ಡಿ. ಶಿವರಾಮ್ (ಗಂಡಸಿ):- ಮಾನ್ಯ ರೇಷ್ಮೆ ಖಾತೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಮಹಿಳೆಯರಿಗಾಗಿ ರೇಷ್ಮೆ ಇಲಾಖೆಯಲ್ಲಿ ಯಾವುದಾದರೂ ವಿಶೇಷ ಘಟಕ ಯೋಜನೆ ಇದೆಯೇ?

ಆ) ಯೋಜನೆ ಇದ್ದಲ್ಲಿ ಈ ಯೋಜನೆಯಲ್ಲಿ ಒದಗಿಸಿರುವ ಹಣವಷ್ಟು? ಹಾಗೂ ತೆಗೆದುಕೊಂಡಿರುವ ಯೋಜನೆಗಳಾವುವು?

ಇ) ಈ ಯೋಜನೆಯಡಿಯಲ್ಲಿ ಯಾವುದಾದರೂ ಬೇಡಿಕೆ ಹಾಸನ ಜಿಲ್ಲೆಯಿಂದ ಬಂದಿದೆಯೇ?

ಈ) ಬಂದಿದ್ದಲ್ಲಿ ಅವುಗಳು ಯಾವ ಹಂತದಲ್ಲಿವೆ? ಮತ್ತು ಅವುಗಳನ್ನು ನಿಯಂತ್ರಿಸುತ್ತಿರುವ ಅಧಿಕಾರಿ ಯಾರು?

ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು):-

ಅ) ಹೌದು.

ಆ) ರಾಷ್ಟ್ರೀಯ ರೇಷ್ಮೆ ಯೋಜನೆಯಡಿಯಲ್ಲಿ ಸರ್ಕಾರೇತರ ಸಂಘ ಸಂಸ್ಥೆಗಳು ಹಾಗೂ ಮಹಿಳಾ ಸಂಘಗಳು ಹಾಗೂ ಮಹಿಳಾ ಮಂಡಳಿಗಳಿಗೆ, ರಾಷ್ಟ್ರದ 5 ಸಾಂಪ್ರದಾಯಿಕ ರೇಷ್ಮೆ ಕೃಷಿ ರಾಜ್ಯಗಳಿಗೆ ಹಾಗೂ 17 ನೂತನ ರೇಷ್ಮೆ ರಾಜ್ಯಗಳಿಗೆ ಒಟ್ಟು 370 ಲಕ್ಷ ರೂ.ಗಳನ್ನು ನಿಗದಿಪಡಿಸಲಾಗಿದೆ. ಈ ಹಣವನ್ನು ರಾಜ್ಯಗಳಿಗೆ ಯೋಜನೆಗಳ ಆಧಾರದ ಮೇಲೆ ಕೇಂದ್ರ ರೇಷ್ಮೆ ಮಂಡಳಿ ಒಪ್ಪಿಗೆ ನೀಡಿ ಬಿಡುಗಡೆ ಮಾಡುತ್ತದೆ. ಯೋಜನೆಗಳು ಹಿಪ್ಪು ನೇರಳೆ ವ್ಯವಸಾಯ, ರೇಷ್ಮೆ ಹುಳು ಸಾಕಾಣಿಕೆ ಹಾಗೂ ರೇಷ್ಮೆ ನೂಲು ಬಿಚ್ಚಾಣಿಕೆಗೆ ಸಂಬಂಧಪಟ್ಟವುಗಳಾಗಿರಬೇಕು.

ಇ) ಹೌದು

ಈ) 1) ಶ್ರೀ ಶಕ್ತಿ ಮಹಿಳಾ ಮಂಡಳಿ, ಹಾಸನ ಯೋಜನೆ: "ರೇಷ್ಮೆ ನೂಲು ಬಿಚ್ಚುವುದರಲ್ಲಿ ಮಹಿಳೆಯರಿಗೆ ತರಬೇತಿ ನೀಡುವುದು " ಯೋಜನೆಗೆ ಮಂಜೂರಾತಿ ನೀಡಲಾಗಿದೆ.

2) ಶ್ರೀ ರಾಘವೇಂದ್ರ ರೇಷ್ಮೆ ನೂಲು ಬಿಚ್ಚುವ ಮಹಿಳಾ ಮಂಡಳಿ,ಚನ್ನರಾಯಪಟ್ಟಣ ಯೋಜನೆ: "ನೂಲು ಬಿಚ್ಚಾಣಿಕೆ ಘಟಕ ಸ್ಥಾಪನೆ" ಈ ಯೋಜನೆ ಬಗ್ಗೆ ಕೆಲವು ವಿವರಗಳು ಬೇಕಾಗಿವೆ. ಅವು ಬಂದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

3) ಮಾನಸ ಮಹಿಳಾ ಮಂಡಳಿ, ಆಲುಮಹಳ್ಳಿ, ಗಂಡಸಿ ಹೋಬಳಿ, ಯೋಜನೆ " ಮಹಿಳೆಯರಿಗೆ ತರಬೇತಿ ಕೊಡುವುದು" ಯೋಜನೆಯನ್ನು ಸದ್ಯದಲ್ಲೇ ಕರೆಯಲಾಗುವ ರಾಜ್ಯ ಮಟ್ಟದ ಸಮಿತಿಯ ಒಪ್ಪಿಗೆಗೆ ಇಡಲಾಗುವುದು.

4) ಸುರಭಿ ಮಹಿಳಾ ಮಂಡಳಿ-ಬಿ. ಕಾಟಿಹಳ್ಳಿ ಹಾಸನ ಯೋಜನೆ " ರೇಷ್ಮೆ ಕೃಷಿಕರಿಗೆ ಬೇಕಾದ ಹುಳು ಸಾಕಾಣಿಕೆ ಉಪಕರಣಗಳನ್ನು ಹಾಗೂ ರೋಗ ನಿರೋಧಕಗಳನ್ನು ಒದಗಿಸುವುದರ ಬಗ್ಗೆ " ಈ ಯೋಜನೆಯ ವಿವರಗಳ ಬಗ್ಗೆ ಇನ್ನೂ ಕೆಲವು ಮಾಹಿತಿಗಳು ಬೇಕಾಗಿದೆ. ಮಾಹಿತಿ ಬಂದನಂತರ ರಾಜ್ಯ, ರಾಜ್ಯ ಮಟ್ಟದ ಸಭೆಯಲ್ಲಿ ಪರಿಗಣನೆಗೆ ಇಡಲಾಗುವುದು.

ಈ ಎಲ್ಲಾ ಕಾರ್ಯಕ್ರಮಗಳನ್ನು ನಿರ್ವಹಿಸಲು ಇಲಾಖೆಯಲ್ಲಿ ಒಬ್ಬ ಮಹಿಳಾ ಯೋಜನಾಧಿಕಾರಿಯನ್ನು ನಿಯೋಜಿಸಲಾಗಿದೆ.

ಶ್ರೀ ಬಿ. ಶಿವರಾಮ್:- ಮಾನ್ಯ ಅಧ್ಯಕ್ಷರೆ ನನ್ನ ಮೊದಲನೆಯ ಪ್ರಶ್ನೆಗೆ ಹೌದು ಎಂದು ಹೇಳಿದ್ದಾರೆ. ಎರಡನೆಯ ಪ್ರಶ್ನೆಗೆ ಮಹಿಳಾ ಸಂಘಗಳು, ಮಹಿಳಾ ಮಂಡಳಿಗಳಿಗೆ ರಾಷ್ಟ್ರದ ಐದು ಸಾಂಪ್ರದಾಯಿಕ ರೇಷ್ಮೆ ಕೃಷಿ ರಾಜ್ಯಗಳಿಗೆ ಹಾಗೂ 17 ನೂತನ ರೇಷ್ಮೆ ಕೃಷಿ ರಾಜ್ಯಗಳಿಗೆ ಒಟ್ಟು 370 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆಂದು ಹೇಳಿದ್ದಾರೆ. ಈ 370 ಲಕ್ಷ ರೂಪಾಯಿಗಳಲ್ಲಿ ನಮ್ಮ ಸರ್ಕಾರ ಎಷ್ಟು ಹಣವನ್ನು ಉಪಯೋಗಿಸಿಕೊಂಡಿದೆ. ಯಾವ್ಯಾವ ಯೋಜನೆಗೆ ಉಪಯೋಗಿಸಿಕೊಂಡಿದೆ ಎನ್ನುವುದು ಬೇಕು. ಎರಡನೆಯದು ಏನೆಂದರೆ ಹಣವನ್ನು ರಾಜ್ಯಗಳಿಗೆ ಯೋಜನಗಳ ಆಧಾರದ ಮೇಲೆ ಕೇಂದ್ರ ರೇಷ್ಮೆ ಮಂಡಳಿಗೆ ಒಪ್ಪಿಗೆ ನೀಡಿ ಬಿಡುಗಡೆ ಮಾಡುತ್ತಾರೆ. ಮತ್ತೆ ಯೋಜನೆಗಳು ಹಿಪ್ಪುನೇರಳೆ ವ್ಯಮನಾಯ, ರೇಷ್ಮೆ ಹುಳು ಸಾಗಾಣಿಕೆ ಹಾಗೂ ರೇಷ್ಮೆ ನೂಲು ಬಿಚ್ಚಾಣಿಕೆ ಎನ್ನತಕ್ಕದ್ದನ್ನು ಹೇಳಿದ್ದಾರೆ. ಇಷ್ಟು ಅಲ್ಲದೆ ಇನ್ನು ಕೆಲವು ಯೋಜನೆಗಳು ಏನಿವೆ ಸರಬರಾಜು ಕೇಂದ್ರ ನೇಯ್ಗೆ ಕೇಂದ್ರ ರೇಷ್ಮೆ ಸಾಗಾಣಿಕೆ ತರಬೇತಿ ಕೇಂದ್ರಗಳಿಗೂ ಈ ವಿಶೇಷ ಘಟಕಾ ಯೋಜನೆಗಳಲ್ಲಿ ಹಣವನ್ನು ಒದಗಿಸಲು ಆಗುತ್ತದಾ ಎನ್ನತಕ್ಕದ್ದು ಎರಡನೆಯ ಪ್ರಶ್ನೆ. ಮೂರನೆಯದು ಹಾಸನ ಜಿಲ್ಲೆಯಲ್ಲಿ ಯಾವುದಾದರೂ ಬೇಡಿಕೆ ಇದೆಯೋ ಎಂದು ಕೇಳಿದ್ದೇನೆ. ಹೌದು ಎಂದು ಹೇಳಿ ನಾಲ್ಕು ಬಂದಿದೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಅದರಲ್ಲಿ ಒಂದಕ್ಕೆ ಮಾತ್ರ ಮಂಜೂರಾತಿ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಅದನ್ನು ಯಾವಾಗ ಕೊಟ್ಟಿದ್ದಾರೆ. ಇನ್ನು ಉಳಿದ ಮೂರಕ್ಕೆ ಪರಿಶೀಲಿಸುತ್ತೇವೆ ನೋಡುತ್ತೇವೆ ಎನ್ನುವಂತಹ ಉತ್ತರವನ್ನು ಕೊಟ್ಟಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಅಲ್ಲಿಗೆ ಭೇಟಿ ಮಾಡಿದ್ದಾರೆಯೆ ಎಂಬುದನ್ನು ಕೇಳುತ್ತೇನೆ.

ಶ್ರೀ ವಿ. ಮುನಿಯಪ್ಪ :- ಸನ್ಮಾನ್ಯ ಅಧ್ಯಕ್ಷರೇ, ಈ ಯೋಜನೆ ಸಂಪೂರ್ಣವಾಗಿ ಕೇಂದ್ರ ರೇಷ್ಮೆ ಮಂಡಳಿಯ ವ್ಯಾಪ್ತಿಗೆ ಒಳಪಟ್ಟಿದೆ. ಯಾವ ಮಹಿಳಾ ಮಂಡಳಿಯಿಂದ ಅರ್ಜಿಗಳು ಬರುತ್ತವೆ, ಆ ಅರ್ಜಿಗಳನ್ನು ಶಿಫಾರಸ್ಸು ಮಾಡಿ ಕೇಂದ್ರ ಸರ್ಕಾರಕ್ಕೆ ಕಳಿಹಿಸಿಕೊಡುವಂಥ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಿದೆ. ಈ ಯೋಜನೆಯಡಿಯಲ್ಲಿ ಸುಮಾರು 370 ಲಕ್ಷ ರೂಪಾಯಿಗಳನ್ನು ಇಡೀ ರಾಷ್ಟ್ರಕ್ಕೆ ಮೀಸಲಾಗಿದೆ. ನಮ್ಮ ರಾಜ್ಯದಲ್ಲಿರುವ ಅನೇಕ ಮಹಿಳಾ ಮಂಡಳಿಗಳಿಂದ ಈಗಾಗಲೇ ಸಾಕಷ್ಟು ಅರ್ಜಿಗಳು ಬಂದಿವೆ. ಅದರಲ್ಲಿ ಕೆಲವು ಅರ್ಜಿಗಳನ್ನು ಶಿಫಾರಸ್ಸು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಅರ್ಜಿಗಳು ಎಷ್ಟರ ಮಟ್ಟಿಗೆ ಮಂಜೂರಾಗಿದೆ, ಮಂಜೂರಾಗಿಲ್ಲ ಎನ್ನತಕ್ಕಂಥ ಅಂಕಿ ಅಂಶಗಳು ನಿಮಗೆ ಬೇಕಾಗಿದ್ದಲ್ಲಿ, ನಿಧಾನವಾಗಿ ಒದಗಿಸಿಕೊಡುತ್ತೇನೆ. ಹಾಸನ ಜಿಲ್ಲೆಯ ಒಂದು ಮಹಿಳಾ ಮಂಡಳಿಯ ಅರ್ಜಿಯನ್ನು ಶಿಫಾರಸ್ಸು ಮಾಡಿ ಮಂಜೂರಾತಿ ಕೊಡುವ ಕೆಲಸ ಮಾಡುತ್ತಿದ್ದೇವೆ.

ಶ್ರೀ ಬಿ. ಶಿವರಾಮು:- ನನ್ನ ಮೂರನೆಯ ಪ್ರಶ್ನೆಗೆ ಉತ್ತರ ಬಂದಿರುವುದಿಲ್ಲ.

ಶ್ರೀ ವಿ. ಮುನಿಯಪ್ಪ:- ಇನ್ನು ಇರತಕ್ಕಂಥ ಮೂರು ಮಹಿಳಾ ಮಂಡಳಿಗಳಿಗೆ ಒಂದು ಗೈಡ್‌ಲೈನ್ಸ್ ಫಿಕ್ಸ್ ಮಾಡಿದ್ದೇವೆ. ಆ ಗೈಡ್‌ಲೈನ್ಸ್ ಪ್ರಕಾರ ಅನೇಕ ವರದಿಗಳು ಬರಬೇಕಾಗಿತ್ತು. ಆ ವರದಿಗಳು ಬಂದನಂತರ ಅದನ್ನು ಕೆಳಗಿನ ಅಧಿಕಾರಿಗಳಿಗೆ ಕಳುಹಿಸಿ ಕೊಟ್ಟು, ಅವರ ವರದಿಯ ಆಧಾರದ ಮೇಲೆ ರಾಜ್ಯ ಮಟ್ಟದ ಒಂದು ಸಮಿತಿ ಸಭೆ ಸೇರಿ, ಆ ಸಭೆಯಲ್ಲಿ ಶಿಫಾರಸ್ಸು ಮಾಡಿ, ಅರ್ಜಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕಂಥ ಒಂದು ವ್ಯವಸ್ಥೆ ಇದೆ.

ಶ್ರೀ ಬಿ. ಶಿವರಾಮು:- ಮಾನ್ಯ ಅಧ್ಯಕ್ಷರೇ, ನಾನು ಕೇಳಿದ್ದುದು 370 ಲಕ್ಷ ರೂಪಾಯಿಗಳ ಹಣವನ್ನಲ್ಲಿ ನಮ್ಮ ರಾಜ್ಯ ಸರ್ಕಾರ ಎಷ್ಟು ಉಪಯೋಗಿಸಿಕೊಂಡಿದೆ ಎಂಬುದರ ಮಾಹಿತಿ ಬೇಕಾಗಿದೆ.

ಅಧ್ಯಕ್ಷರು:- 370 ಲಕ್ಷ ರೂಪಾಯಿಯಲ್ಲಿ ರಾಜ್ಯ ಸರ್ಕಾರ ಎಷ್ಟು ಹಣ ಉಪಯೋಗಿಸಿ ಕೊಂಡಿದೆ?

ಶ್ರೀ ವಿ. ಮುನಿಯಪ್ಪ:- ನಾವು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಕಳುಹಿಸಿದ್ದೇವೆ. ಅದರಲ್ಲಿ ಎಷ್ಟು ಹಣ ಮಂಜೂರಾಗಿದೆ ? ಎಷ್ಟು ಹಣ ಉಪಯೋಗವಾಗಿದೆ? ಎನ್ನತಕ್ಕಂಥ ಅಂಕಿ ಅಂಶಗಳನ್ನು ತರಿಸಿಕೊಡುತ್ತೇನೆ.

ಅಧ್ಯಕ್ಷರು :- ನೀವು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದೀರಿ. ಆದರೆ ನಮ್ಮ ಮಾಹಿತಿ ಪ್ರಕಾರ ಹಣವನ್ನು ಉಪಯೋಗಿಸಿಕೊಂಡಿಲ್ಲವೆಂಬ ಅಭಿಪ್ರಾಯವೇ?

ಶ್ರೀ ವಿ. ಮುನಿಯಪ್ಪ:- ಕೆಲವಕ್ಕೆ ಮಂಜೂರಾಗಿದೆ. ಅದರಲ್ಲಿ ಹಾಸನದಲ್ಲಿರುವ ಒಂದು ಮಹಿಳಾ ಮಂಡಳಿಗೂ ಮಂಜೂರಾಗಿದೆ.

ಅಧ್ಯಕ್ಷರು:- ಹಣ ಮಂಜಾರಾಗಿದೆಯೆಂದು ಹೇಳುತ್ತಿದ್ದಾರೆ

ಶ್ರೀ ವಿ. ಮುನಿಯಪ್ಪ:- ಹಾಸನಕ್ಕೆ 1 ಲಕ್ಷ 75 ಸಾವಿರ ರೂಪಾಯಿಗಳು ಮಂಜೂರಾದ ಸ್ಯಾಂಕ್ಷನ್ ಆರ್ಡರ್ ಬಂದಿದೆ.

ಶ್ರೀ ಬಿ. ಶಿವರಾಮು:- ಎಷ್ಟು ಹಣವನ್ನು ಉಪಯೋಗಿಸಿಕೊಂಡಿದ್ದಾರೆ? ಅಥವಾ ಎಷ್ಟು ಅರ್ಜಿಗಳನ್ನು ಸಮಿತಿಗೆ ಶಿಫಾರಸ್ಸು ಮಾಡಿದ್ದಾರೆ ಎನ್ನತಕ್ಕಂಥ ಅಂಕಿ ಅಂಶಗಳು ಇಲ್ಲವೆಂದರೆ ಏನರ್ಥ?

ಅಧ್ಯಕ್ಷರು:- ಸಚಿವರು 370 ಲಕ್ಷ ರೂಪಾಯಿಗಳನ್ನು ಶಿಫಾರಸ್ಸು ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ.

ಶ್ರೀ ಬಿ. ಶಿವರಾಮು:- ಅವರು ಹೇಳಿದ್ದುದು ಹಾಗಲ್ಲ, ಉತ್ತರದಲ್ಲಿ ಏನಿದೆಯೆಂದರೆ: ರಾಷ್ಟ್ರದ 5 ಸಂಪ್ರದಾಯಿಕ ರೇಷ್ಮೆ ಕೃಷಿ ರಾಜ್ಯಗಳಿಗೆ ಹಾಗೂ 17 ನೂತನ ರೇಷ್ಮೆ ಕೃಷಿ ರಾಜ್ಯಗಳಿಗೆ ಒಟ್ಟು 370 ಲಕ್ಷ ರೂಪಾಯಿಗಳನ್ನು ನಿಗದಿಪಡಿಸಲಾಗಿದೆಯೆಂದು ಹೇಳಿದ್ದಾರೆ. ಈ ಹಣವನ್ನು ರಾಜ್ಯಗಳಿಗೆ ಯೋಜನೆಗಳ ಆಧಾರದ ಮೇಲೆ ಮಂಜೂರು ಮಾಡಲಾಗುತ್ತದೆಂದು ಉತ್ತರದಲ್ಲಿ ಹೇಳಿದ್ದಾರೆ. ವಿಶೇಷ ಘಟಕ ಯೋಜನೆಯಡಿಯಲ್ಲಿ ಈ 370 ಲಕ್ಷ ರೂಪಾಯಿಗಳನ್ನು ನಮ್ಮ ಸರ್ಕಾರ ಉಪಯೋಗಿಸಿಕೊಳ್ಳುವುದಕ್ಕೆ ಎಷ್ಟು ಯೋಜನೆಗಳನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ? ಎಷ್ಟು ಹಣಕ್ಕೆ ಶಿಫಾರಸ್ಸು ಮಾಡಿದ್ದೀರಿ ಎನ್ನತಕ್ಕಂಥಾದ್ದು ಮುಖ್ಯ ಪ್ರಶ್ನೆ. ಆ ಹಣದಲ್ಲಿ ಎಷ್ಟನ್ನು ಉಪಯೋಗಿಸಿಕೊಳ್ಳಲಾಗುತ್ತದೆಂಬುದು ನಮಗೆ ಗೊತ್ತಾಗುತ್ತದೆ. ಇದಕ್ಕಾಗಿ ಒಬ್ಬ ಮಹಿಳಾ ಯೋಜನಾಧಿಕಾರಿಯನ್ನು ನೇಮಿಸಿದ್ದಾರೆ. ನಾನು ಹಾಸನ ಜಿಲ್ಲೆಯಲ್ಲಿರುವ 7 ಮಹಿಳಾ ಮಂಡಳಿಗಳ ಬಗ್ಗೆ ಪ್ರಪೋಸಲ್ ಅನ್ನು ಕೊಟ್ಟಿದ್ದೇನೆ. ಇಮವರೆವಿಗೂ ಆರು ತಿಂಗಳಾದರೂ ಯಾವುದೇ ಸಂಬಂಧಪಟ್ಟ ಅಧಿಕಾರಿಗಳು ಪಾರ್ಟಿಯನ್ನು ನೋಡಲು ಬಂದಿಲ್ಲ, ನಾನು ಅರ್ಜಿಗಳನ್ನು ಮುಂಚೆಯೇ ಕೊಟ್ಟು, ಅಧಿಕಾರಿಗಳನ್ನು ಭೇಟಿ ಮಾಡಿ ಕನಿಷ್ಠ ಪಕ್ಷ ಸ್ಥಳ ಪರೀಕ್ಷೆ ನಡೆಸಿರಿ ಮತ್ತು ಕೊಟ್ಟಿರತಕ್ಕಂಥ ಅರ್ಜಿಗಳು ಫೀಸಿಬಲ್ ಆಥವಾ ನಾಟ್ ಫೀಸಿಬಲ್ ಎನ್ನತಕ್ಕಂಥಾದ್ದನ್ನು ನೋಡಿ ಎನ್ನುವ ಮಾತನ್ನು ಹೇಳಿದ್ದೇನೆ. ಆದರೂ ಇನ್ನೂ ನೋಡಿಲ್ಲ. ಇದು ವಿಶೇಷ ಘಟಕ ಯೋಜನೆ. ವಿಶೇಷ ಘಟಕ ಯೋಜನೆ ಎಂದರೆ ಮಹಿಳೆಯರಿಗೆ ಈ ಯೋಜನೆಯಲ್ಲಿ ಆದ್ಯತೆಕೊಟ್ಟು ಕೆಲಸ ಮಾಡಿಸುವಂಥಾದ್ದು. ಅವರಿಗೆ ಇರತಕ್ಕಂಥ ಸವಲತ್ತುಗಳನ್ನು ಇನ್ನು ಉಪಯೋಗಿಸಿಕೊಂಡಿಲ್ಲವೆಂದರೆ, ಎಷ್ಟರ ಮಟ್ಟಿಗೆ ನಮ್ಮ ಸರ್ಕಾರ ಹಣವನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯ? ಸುಮಾರು ಆರು ತಿಂಗಳಿನಿಂದ ಈ ಮಹಿಳಾ ಮಂಡಳಿಯವರು ಸುತ್ತುತ್ತಿದ್ದಾರೆ. ಇನ್ನು ಸ್ಥಳ ಪರೀಕ್ಷೆ ನಡೆಸಿಲ್ಲವೆಂದರೆ, ನಾನು ಈ ಪ್ರಶ್ನೆಯನ್ನು ಕೇಳತಕ್ಕಂಥ ಪ್ರಮೇಯವೇ ಇರುತ್ತಿರಲಿಲ್ಲ.

ಅಧ್ಯಕ್ಷರು:- ಪ್ರಶ್ನೋತ್ತರ ಕಾಲದಲ್ಲಿ ಪ್ರಶ್ನೆ ಕೇಳಿ. ಬೇರೆ ವಿಷಯ ಹೇಳುವುದಕ್ಕೆ ಕಾಲಾವಕಾಶ ಇಲ್ಲ.

ಶ್ರೀ ಬಿ. ಶಿವರಾಮು:- ಸುಮಾರು ಆರು ತಿಂಗಳಿನಿಂದ ಸ್ಥಳ ಪರೀಕ್ಷೆ ನಡಸಲಿಕ್ಕೆ ಅಧಿಕಾರಿಗಳು ಭೇಟಿ ನೀಡದಿದ್ದುದಕ್ಕಾಗಿ ನನ್ನ ಪ್ರಶ್ನೆಗೆ ಉತ್ತರ ಕೇಳಿದ್ದೇನೆ. ಯಾವ ಅಧಿಕಾರಿಗಳು ಸ್ಥಳಕ್ಕೆ ಭೇಟಿ ಕೊಟ್ಟು ಪರಿಶೀಲನೆ ಮಾಡಿರತಕ್ಕಂಥ ಉತ್ತರ ಇಲ್ಲ. ಮೊದಲನೆಯದಾಗಿ, ಮಂಜೂರಾಗಿರತಕ್ಕಂಥ ಒಟ್ಟು 8 ಅರ್ಜಿಗಳಲ್ಲಿ ಈಗ ಈ

ಪ್ರಶ್ನೆ ಬಂದ ನಂತರ ಮಂಜೂರಾಗಿರುವ ಉತ್ತರವನ್ನು ಓದಗಿಸಲಾಗಿದೆ. ಎರಡನೆಯದಾಗಿ, ರಾಘವೇಂದ್ರ ರೇಷ್ಮೆ ಮಂಡಳಿಯವರು ಸುಮಾರು ಒಂದೂವರೆ ವರ್ಷದಿಂದ ತಿರುಗುತ್ತಿದ್ದಾರೆ. ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಲ್ಲಿ ಸಂಬಂಧಪಟ್ಟ ಮಹಿಳಾ ಅಧಿಕಾರಿಗಳಿದ್ದಾರೆ. ಅವರು ನಾಲ್ಕು ಅಪ್ಲಿಕೇಷನ್‌ಗಳನ್ನು ಕಾಲ್‌ಫರ್ ಮಾಡಿದಾಗ ನಾನು ದಯಮಾಡಿ ಕಾಲ್‌ಫರ್ ಮಾಡಬೇಡಿ, ಅದು ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನು ಹೇಳಿದ್ದೇನೆ. ನಂತರ ಅವರಿಗೆ ಅಂಕಿ-ಅಂಶಗಳನ್ನು ಹೇಳಿದೆ. ಬಹುಶಃ ಹೀಗೆ ಇರತಕ್ಕಂಥಾದ್ದು ಸರಿ ಎನ್ನತಕ್ಕಂಥ ಅಭಿಪ್ರಾಯ ನನಗೆ ಬಂದಿದೆ.

ಶ್ರೀ ವಿ. ಮುನಿಯಪ್ಪ:- ಸನ್ಮಾನ್ಯ ಅಧ್ಯಕ್ಷರೇ, ರಾಘವೇಂದ್ರ ರೇಷ್ಮೆ ನೂಲು ಮಹಿಳಾ ಮಂಡಳಿ ಬಗ್ಗೆ ನಾವು ಸಂಬಂಧಪಟ್ಟ ಜಿಲ್ಲೆಯ ಉಪ ನಿರ್ದೇಶಕರಿಂದ ವರದಿಯನ್ನು ಕೇಳಿದ್ದೇವೆ. ಅವರ ವರದಿ ಬಂದ ನಂತರ ಸರ್ಕಾರದ ಮತಿಯಿಂದ ಶಿಫಾರಸ್ಸು ಮಾಡತಕ್ಕಂಥ ಕೆಲಸ ಮಾಡುತ್ತೇವೆ.

ಹೊಸ ಆಸ್ಪತ್ರೆಗಳ ಮಂಜೂರಾತಿ

88 (486). ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಕೊರಟಗೆರೆ ತಾಲ್ಲೂಕು ತೀತ ಗ್ರಾಮದಲ್ಲಿ ಹೊಸದಾಗಿ ಆರೋಗ್ಯ ಆಸ್ಪತ್ರೆ ಮಂಜೂರು ಮಾಡಲು ಸಾರ್ವಜನಿಕರಿಂದ ವಂತಿಗೆ ಸರ್ಕಾರಕ್ಕೆ ಕಟ್ಟಿ ಮನವಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದಯೇ?

ಆ) ಹಾಗಿದಲ್ಲಿ, ಈ ಗ್ರಾಮಕ್ಕೆ ಆಸ್ಪತ್ರೆ ಮಂಜೂರು ಮಾಡಲು ಸರ್ಕಾರವು ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) 1991-92ನೇ ಸಾಲಿನಲ್ಲಿ ಪ್ರಸ್ತಾವನೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

Upgaradation of Hospitals

89 (248). SRI.L.R. SHIVARAMEGOWDA:- Will the Minister of Health and Family Welfare be pleased to state;

1. How many taluk Level Hospitals upagraded ?
2. What are the facilities provided for these upgraded Hospitals.?
3. Whether it has come to the notice of Govervment about the lack of facilities at G.H. Nagamangala ?
4. How many new Maternity Hospitals are to be sanctioned during 1992-93?

Sri G. Puttaswamy Gowda (Minister for Health and family welfare):-

1. 141

The facilities provided for 30 bedded and 50 bedded hospitals are as shown below:-

Details	30 beded Hospitals	50 beded Hospitals
Drugs	Rs.1.00 lakh	Rs.1.50 Lakhs